At Ranjit
2nd Glorious Week
DULHA
ಚಾರ್ಲಿ—ಚಂದ್ರಪ್ರಭಾ
— ಪಾತ್ರವಹಿಸಿರುವ —
ದುಲ್ಹಾ

Regd. No. M 1299 SATYAVADI Fonnded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 260 | ಬುಧವಾರ 31—7—46 | ಬಿಡಿ ಪ್ರತಿ 3 ಪೈ

At Opera
LAVANGI
4 ನೇ ಅಮೋಘ ವಾರ
ಲವಂಗಿ
From 3—8—46
ಭಕ್ತ ಕಲಾತಿ

ಡೆಲ್ಲಿಯಲ್ಲಿ ಮುಷ್ಕರಗಳ ಹಾವಳಿ

ಸುಲಭ ಸರಕಾರ

ಎಲ್ಲೆಲ್ಲಿ ನೋಡಿದರೂ ಜವಾಬ್ದಾರಿ ಸರಕಾರ, ರಾಷ್ಟ್ರೀಯ ಸರಕಾರ, ಆ ಸರಕಾರ, ಈ ಸರಕಾರ, ಎಂದು ಹೇಳಿ ಅಸಾಧ್ಯವಾಗಿ ಕೂಗೆಬ್ಬಿಸುತ್ತಾರೆ. ಯಾವ ಸರಕಾರವೇ ಆಗಿದ್ದರೂ ಅದು ಸುಲಭವಾಗಿರುತ್ತದೆಯೇ ಎಂಬುದನ್ನು ನೋಡಬೇಕು. ಕಮ್ಮಿ ಖರ್ಚಿನಲ್ಲಿ ನಡೆಯಬೇಕು. ಅಷ್ಟಾದರೆ ಸರಕಾರದ ಕಡೆಯ ತವೆಲ್ಲಾ ಬಹು ಸುಲಭವಾಗುತ್ತದೆ.

ಯಾವ ಕಡೆ ಬೇಕಾದರೂ ನೋಡಿರಿ. 'ಸಂಬಳ ಹೆಚ್ಚು ಮಾಡಿರಿ, ತುಟ್ಟಿ ಭತ್ಯ ಕೊಡಿರಿ, ಬೋನಸ್ ಕೊಡಿರಿ, ಹೆಚ್ಚು ದಿನ ರಜಾ ಕೊಡಿರಿ, ಕೆಲಸ ಕಮ್ಮಿ ಕೊಡಿರಿ" ಎಂದು ಎಲ್ಲೆಲ್ಲಿಯೂ ಗಲಾಟೆಗಳು. ಕೇಳಿದುದನ್ನೆಲ್ಲಾ ಕೊಡಬೇಕು ಇಲ್ಲವಾದರೆ ಮುಷ್ಕರ, ಸೆರೆವಾಸ, ಪತಿತ್ಯಾಗ್ರಹ, ಕೂಗು, ಗಲಾಟೆ. ದೊಂಬಿ, ಗುಂಡು, ಎಲ್ಲವೂ ಒಂದರ ಹಿಂದೆ ಒಂದು ನಡೆದುಹೋಗುವುದು! ಸುಲಭ ಸರಕಾರ ಮಾಡಿಬಿಟ್ಟರೆ ಇದೊಂದು ತಂಟೆಯೇ ಇಲ್ಲ.

'ಇದೇನೋ ಹೊಸ ವಿಧಾನ' ಎಂದು ಯಾರೂ ತಿಳಿಯಬೇಕಾಗಿಲ್ಲ ಹೊಸತು ಯಾವುದೂ ಇಲ್ಲ. ಎಲ್ಲಾ ಹಳೆಯದೇ. ಉತ್ತಮವಾದ ವಿಧಾನ. ಇದನ್ನು ಕಂಡುಹಿಡಿದವರು ನಮ್ಮ ಮೈಸೂರಿನವರು. ನಮ್ಮ ಸರಕಾರವೇ. ಅದು ಮಾವರಿಗಾಗಿ ಮಾಡಿದ ವಿಧಾನ. ಚೆನ್ನಾಗಿ ನಡೆಯುತ್ತೆ. ಆದ್ದರಿಂದಲೇ ಅದನ್ನು ಖಾಯಂ ಮಾಡಲಾಗಿದೆ. ಇತರ ಇಲಾಖೆಗಳಲ್ಲಿಯೂ ಅದನ್ನೇ ಜಾರಿಗೆ ತರಬೇಕು. ಆದರೆ ಯಾರೂ ಈವರೆಗೆ ಆ ಸೂಚನೆಯನ್ನೇ ಕೊಟ್ಟಿಲ್ಲ. ಆದ್ದರಿಂದ ನಾನೇ ಆ ಸೂಚನೆಯನ್ನು ತಿಳಿಸಬೇಕೆಂದಿದ್ದೇನೆ. ಇನ್ನೆಗೆ ನೀವೂ ಅದನ್ನು ತಿಳಿದುಕೊಳ್ಳಿರಿ.

'ಕಂದಾಯ ಮಾಫಿ ಮಾಡಿ' ಸ್ಕೂಲು ಕೊಡಿ' 'ಆಸ್ಪತ್ರೆ ಕೊಡಿ' 'ಕೆರೆ ಕಟ್ಟೆ ಮಾಡಿ ಕೊಡಿ' ಎಂದೆಲ್ಲಾ ಕೇಳಬೇಕಾದದ್ದೇ ಇಲ್ಲ, ಸುಲಭ ಸರಕಾರ ಜಾರಿಗೆ ಬಂದರೆ ಎಲ್ಲವೂ ತಾನಾಗಿ ಸುಲಭದಲ್ಲಿಯೇ ನಡೆದುಹೋಗುತ್ತದೆ.

ನಮ್ಮ ಸರಕಾರದವರು ಈ ವಿಧಾನವನ್ನು ಮೊದರಿಗಾಗಿ ಆಯುರ್ವೇದ ಇಲಾಖೆಯಲ್ಲಿ ಜಾರಿಗೆ ತಂದರು. ಹಳ್ಳಿಗಳಲ್ಲೆಲ್ಲಾ ಒಂದೊಂದು ಆಯುರ್ವೇದ ಆಸ್ಪತ್ರೆ ತೆರೆದು ಜನರ ಆರೋಗ್ಯ ರಕ್ಷಣಾ ಕಾರ್ಯವನ್ನು ನಡೆಸಿದರು. ಇದೇನೂ ಕಷ್ಟವೆಂದು ತಿಳಿದುಕೊಳ್ಳಬೇಡಿರಿ, ಬಹು ಸುಲಭವಿದೆ. ಆಯುರ್ವೇದ ಪಂಡಿತರೊಬ್ಬರಿಗೆ ತಿಂಗಳಿಗೆ ಮೂವತ್ತು ನಲವತ್ತು ರೂಪ್ಯಾಗಳನ್ನ ಕೊಟ್ಟರಾಯಿತು. ಆ ಊರಿನ ಜನಗಳ ಆರೋಗ್ಯ ರಕ್ಷಣಾ ಕಾರ್ಯವನ್ನೆಲ್ಲಾ ಅತಡೇ ವಹಿಸಿಕೊಳ್ಳುತ್ತಾನೆ- ಮೂಲಿಕೆಗಳನ್ನು ತರುವುದು, ಔಷಧಗಳನ್ನು ತಯಾರಿಸುವುದು, ರೋಗಿಗಳನ್ನು ಉಪಚರಿಸುವುದು ಅವರಿಗೆ ಚಿಕಿತ್ಸೆ ಮಾಡುವುದು, ಇತ್ಯಾದಿ ಎಲ್ಲಾ ಅಧಿಕಾರಗಳೂ ಆತನ ಹಕ್ಕಿನ ದಾಗಿರುತ್ತವೆ. ದಿವಾನಗಿರಿಯಿಂದ ಹಿಡಿದು ಡಾಕ್ಟರ್ ಸಾಹೇಬ್‌ಗಿರಿವರಗಿನ ಎಲ್ಲ ಅಧಿಕಾರಗಳೂ ಅವರಿಗೇನೇ ಸೇರಿರುತ್ತವೆ. ಇಂಥಾ ಒಂದು ಸರ್ವಾಧಿಕಾರ ಪಟ್ಟವನ್ನೇ ಆ ಪಂಡಿತರಿಗೆ ನಮ್ಮ ಸರಕಾರದವರು ಕೊಟ್ಟಿರುತ್ತಾರೆ.

ಸುಲಭ ಸರಕಾರ ರಚನಾ ವಿಧಾನ ಸೂತ್ರಗಳಲ್ಲಿನಮ್ಮ ಸರಕಾರವು ಮಾದರಿಗಾಗಿ ಆಚರಣೆಗೆ ತಂದ್ರು ಯಶಸ್ವಿಯಾಗಿ ನೆಡೆಸಿಕೊಂಡು ಬಂದುದಿದು.

ಇತರ ಇಲಾಖೆಗಳಲ್ಲಿ ಈ ಸೂತ್ರದಂತೆ ಆಚರಣೆಗೆ ತರುವ ಸಲಹೆಗಳನ್ನು ನಾಳೆ ನೋಡಿರಿ. **"ಮಲ್ಲ"**

ಶಾಂತಿ ಸಮ್ಮೇಳನ

ಪ್ಯಾರಿಸ್ಸಿನಲ್ಲಿ ನಡೆಯುತ್ತಿರುವ ಮಹಾ ಶಾಂತಿ ಸಮ್ಮೇಳನಕ್ಕೆ 2000 ಪ್ರತಿನಿಧಿಗಳು ಬಂದಿರುವುದು.

ಅಂಚೆ ತಂತಿ ಮುಷ್ಕರವೇ

ಹೊಸದೆಹಲಿ ಜು 29 — ನಾಳೆ ಸಂಜೆಯೊಳಗೆ ಸರಕಾರದವರು ತಮ್ಮ ಬೇಡಿಕೆಗಳನ್ನು ನಡೆಸಿ ಕೊಡದಿದ್ದರೆ, ತಾವು ಆಗಸ್ಟ್ 3 ರಿಂದ ಮುಷ್ಕರ ಹೂಡುವುದಾಗಿ ಅಂಚೆ ಮತ್ತು ತಂತಿ ಫೆಡರೇಷನ್ನಿನವರು ನಿರ್ಧರಿಸಿದ್ದಾರೆ.

ಬಿರುದುಗಳು ಬೇಡ

ಬೊಂಬಾಯಿ ಜು 29 — ಮುಸ್ಲಿಂ ಲೀಗ್ ಕೌನ್ಸಿಲ್ಲಿನಲ್ಲಾದ ಠರಾವಿನಂತೆ ಹಲ ಪ್ರಮುಖ ಮುಸ್ಲಿಂ ಬಿರುದಾಂಕಿತರು ತಮ್ಮ ಬಿರುದುಗಳನ್ನು ತ್ಯಜಿಸಿ ಸನ್ನದ್ದುಗಳನ್ನು ಬ್ರಿ| ಸರಕಾರಕ್ಕೆ ವಾಪಸ್ ಕಳುಹಿಸಲು ನಿರ್ಧರಿಸಿದರು.

ಭಾರತದ ಅನ್ನ ಪರಿಸ್ಥಿತಿ

ಲಂಡನ್ ಜು 29 — ಕಾಮನ್ಸಿನಲ್ಲಿ ಮಿ| ಹಂಡರ್‌ಸನ್ನರು ಭಾರತದ ಅನ್ನ ಪರಿಸ್ಥಿತಿಯು ಇನ್ನೂ ಕಟುತರವಾಗಿಯೇ ಇದೆಯೆಂದು ತಿಳಿಸಿದರು.

"ವಿಶ್ವಕರ್ಣಾಟಕ"

ಬೆಂಗಳೂರು ಜು 28 — 'ವಿಶ್ವಕರ್ಣಾಟಕಕ್ಕೆ' ಸರಕಾರದವರು ಕೊಟ್ಟರುವ ಷೋಕಾಸ್ ನೋಟ್‌ಗೆಸಿನ ವಿಷಯವು ಬೆಂಗಳೂರು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘದ ವಿಶಾಲಿಂಗಿನಲ್ಲಿ ಪ್ರತಿಭಟಿಸಲಾಯಿತು. ಇದೇ ವಿಷಯದಲ್ಲಿ ಪತ್ರಿಕಾ ಮಾಲೀಕರ ಮತ್ತು ಸಂಪಾದಕರ ಸಂಘದವರೂ ತಮ್ಮ ವಿರೋಧವನ್ನು ವ್ಯಕ್ತ ಪಡಿಸಿರುವರು.

ವಿದ್ಯಾರ್ಥಿಗಳ ಮುಷ್ಕರ

ಗುಬ್ಬಿ ಹೈಸ್ಕೂಲಿನಲ್ಲಿ ಸಾಕಷ್ಟು ಉಪಾಧ್ಯಾಯರಿಲ್ಲದೆ ಪಾಠಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಅಲ್ಲಿಯ ವಿದ್ಯಾರ್ಥಿಗಳು ಮುಷ್ಕರಕ್ಕೆ ಕೈ ಹಾಕಿರುವರೆಂದು ತಿಳಿಯುಬಂದಿದೆ.

ಮುಷ್ಕರ ನಿಂತಿತು

ಚಿಕ್ಕಮಗಳೂರಿನಲ್ಲಿ ಮುಷ್ಕರ ಹೂಡಿದ್ದ ಅಂಚೆ ನೌಕರರು ತಾ|| 29 ರಿಂದ ಕೆಲಸಕ್ಕೆ ಒರಲುಪಕ್ಕವಿಸಿದ್ದಾರೆ.

ಮುಷ್ಕರ ಹಾವಳಿ

ನವದೆಹಲಿ ಜು 29— ಹಳೇ ಡೆಲ್ಲಿಯ ಮುನಿಸಿಪಲ್ ಕೆಲಸಗಾರರು 3000 ಮಂದಿ ಮುಷ್ಕರ ಹೂಡಿದಿರುವರು — 18 ದಿನದಿಂದ ಅಂಚೆ ಮುಷ್ಕರ ಬಿರುಸಾಗಿದೆ — ಬಿಲ್ಡಾ ಮತ್ತು ಜಮುನಾ ಗಿರಣಿಗಳ 5 ಸಾವಿರ ಮಂದಿ ಮುಷ್ಕರ ಬೇರೆ — ಸಾಲದ್ದಕ್ಕೆ ಹಳೆ ಮತ್ತು ಹೊಸ ಡೆಲ್ಲಿಯ ಆಸ್ಪತ್ರೆ 600 ಮಂದಿ ಕಾಂಪೌಂಡರ್ ಸೆಪ್ಟೆಂಬರ್ ಇಷ್ಟರ ಜೊತೆಗೆ ಇಲ್ಲಿ ಬಾಂಕ್ ಕೆಲಸಗಾರರು ಮುಷ್ಕರ ನಡೆಸುವರು.

ಬತ್ತ ಪತ್ತೆ

ತಿನವೊಗ್ಗಾದ ಒಂದು ಅಕ್ಕಿ ಗಿರಣಿಯವರು ಕಡಲೇಕಾಯಿ ಹೊಟ್ಟಿನ ರಾಶಿಯಲ್ಲಿ 76 ಮೂಟೆ ಭತ್ತ ಮುಚ್ಚಿಟ್ಟಿದುದು ಪತ್ತೆಯಾಗಿದೆ.

ಚಿನ್ನಗಣಿ ಕಂಪೆನಿ ಪರಿಹಾರ

ಬೆಂಗಳೂರು ಜು 29 — ಗಣಿ ಕಂಪೆನಿಯವರಿಗೆ ಮೊದಲು 5 ತಿಂಗಳಿಗೆ 12 ಲಕ್ಷ ರೂ. ಪರಿಹಾರ ಸಮಿತಿ ಕೊಡಲು ತೀರ್ಮಾನಿಸಿದೆ.

ಫೋಟೊ ನೋಟುಗಳ ಹಾವಳಿ

ಲಂಡನ್ ಜು 29 — ಬ್ರಿಟನ್ ಮತ್ತು ಪ್ರಾನ್ಸುಗಳಲ್ಲಿ ಫೋಟೊ ನೋಟುಗಳ ಹಾವಳಿ ವಿಪರೀತವಾಗಿದೆ. ಇವು ಎಲ್ಲಿ ತಯಾರಾಗುವುದೆಂಬುದನ್ನು ಪತ್ತೆಹಚ್ಚಲು 8 ಸರಕಾರಗಳು ಪ್ರಯತ್ನಿಸುತ್ತಿವೆ.

ವಾಷಿಂಗ್ಟನ್ ಜು 29— ಭಾರತಕ್ಕೆ ಆಗಸ್ಟ್ ತಿಂಗಳಲ್ಲಿ ಅಮೇರಿಕಾದಿಂದ 80 ಸಾವಿರ ಟನ್ ಧಾನ್ಯ ಕೊಡಲಾಗುವುದೆಂದು ಪ್ರಕಟವಾಗಿದೆ.

ಮದರಾಸು ಜು 39 — ಮದರಾಸು ಸರ್ಕಲ್ಲಿನಲ್ಲಿ 51 ಪೋಸ್ಟಾಫೀಸುಗಳ ಅಂಚೆ ಮುಷ್ಕರ ನಿಂತು, ನೌಕರರು ಕೆಲಸಕ್ಕೆ ಬಂದಿರುವರೆಂದು ಹೇಳಲಾಗಿದೆ.

ಆರ್ಕಾಟು ಮೊದಲಿಯಾರರ ದಿವಾನಗಿರಿ ನಮಗೆ ಬೇಡ

ಶಾರದ ವಿಲಾಸ ಕಾಲೇಜಿನಲ್ಲಿ ಪ್ರಚಂಡ ಪ್ರತಿಭಟನೆ

ಮೈಸೂರು ಜುಲೈ 31 — ಈ ದಿವಸ ಶಾರದ ವಿಲಾಸ ಕಾಲೇಜಿನ ವಿದ್ಯಾರ್ಥಿಗಳು ಆರ್ಕಾಟ ರಾಮಸ್ವಾಮಿ ಮೊದಲಿಯಾರರ ದಿವಾನಗಿರಿ ನೇಮಕದ ಬಗ್ಗೆ ಪ್ರಚಂಡ ಮುಷ್ಕರ ನಡೆಸಿ ತರಗತಿಗಳಿಗೆ ಬಹಿಷ್ಕಾರ ಹಾಕಿದರು. ಶ್ರೀಗಳಾದ ಕೆ ಶ್ರೀಕಂಠಯ್ಯ, ರಾಜಣ್ಣ ಮತ್ತು ಏ ಡಿ ಮಧುರಾನಾಥರವರುಗಳು ಪ್ರತಿಭಟನಾ ಭಾಷಣವನ್ನು ಮಾಡಿದರು. ಇದರಲ್ಲಿ ಇಂಜನೀಯರಿಂಗ್ ಸ್ಕೂಲ್ ಸಹಾ ಭಾಗಿಯಾಗಿದ್ದಿತು.

ಟಿ. ಎ. ಮಧುರಂ

ಟಿ ಎ ಮಧುರಂ ಸಂಸ್ಕೃತಾ ಪಿಕ್ಚರ್ಸ್‌ರವರ 'ದೇವದಾಸಿ' ಚಿತ್ರದಲ್ಲಿ ಅಭಿನಯಿಸುವಳೆಂದು ಈ ಮೊದಲು ಪ್ರಕಟವಾಗಿತ್ತಷ್ಟೆ. ಪಕ್ಕಿರಾಜ್‌ರವರ 'ಕನ್ನಿಕಾ' ಇತರ ಎರಡು ಚಿತ್ರಗಳಲ್ಲಿ ಆಕೆ ಅಭಿನಯಿಸುವಳೆಂದು ಇದೀಗ ಗೊತ್ತಾಗಿದೆ. ಟಿ ಎ. ಮಧುರಂ ಪುನಃ ಚಲಚಿತ್ರಗಳಲ್ಲಿ ಅಭಿನಯಿಸಲು ಕಾರಣವಾದ ಮೊದಲ ಕೆಲಸ ಎನ್. ಕೃಷ್ಣಸ್ವಾಮಯ್ಯರವರ ಪ್ರೀವಿ ಕೌನ್ಸಿಲಿನಲ್ಲಿ ಅಪೀಲಿಗೆ ಸಮ್ಮತಿ ದೊರೆತಿದೆಯಷ್ಟೆ—ಅದಕ್ಕೆ ಬೇಕಾಗುವ ಖರ್ಚಿನ ಹಣ ಸಂಗ್ರಹಿಸಿ ಮದ್ರಾಸಿನಲ್ಲಿರುವ ತಮಿಳು ಚಲಚಿತ್ರ ಸೇವೆಗೆ ಇಳಿದಿದಾಗಿದೆ. (ಪ್ರ)

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕ ಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

ಅಕ್ಕ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

Get Medical Diplomas

At home :— Ayurvedic Homeopathic, Unani, etc Prospectus Free.

Old Indian Medical College
Kotgarh, Simla

For Good Printing

L. N. Press

Sriramp et, MYSORE

ಪೋಲರಿಗಾಗಿ ಜರ್ಮನರು ಡ್ಯಾಂಜ್ಸಿಗ್ ನಗರವನ್ನು ಶುದ್ಧಿ ಪಡಿಸುತ್ತಿರುವರು.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸೆನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಬೆರೆಸಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧವಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

— ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಶಕ್ತಿ ಸುಧಾ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ನಿಸ್ಸಾರವಾದ, ನತಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿ ಸುಧಾ, 1067 ಚಾಮರಾಜ್ [illegible] ಮೈಸೂರು

SHAKTI SUDHA

For Rich Blood, Strong Nerves & Exuberant Vitality

Edited, Printed and Published by M. S. Krishna Rao, at th Satyavadi Press, Chamaraja Agrahar, Mysore